**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ರಮೇಶ್ ಬಾಬು ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಸ್ತಾವನೆಗೆ ಉತ್ತರವನ್ನು ಸಲ್ಲಿಸುವ ಬಗ್ಗೆ:**

**ಪ್ರಸ್ತಾವನೆ:**

"ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕದಲ್ಲಿ ಹಿರಿಯ ಕೆ.ಎ.ಎಸ್ ಅಧಿಕಾರಿಗಳಿಗೆ ಅವರ ಸೇವಾಹಿರಿತನ ಮತ್ತು ನಿಯಮಾವಳಿಗಳ ಅನ್ವಯ ಐ.ಎ.ಎಸ್ ಹುದ್ದೆಗೆ ಪದೋನ್ನತಿಯನ್ನು ನೀಡುತ್ತದೆ. ಕೇಂದ್ರ ಸರ್ಕಾರದ ಲೋಕಸೇವಾ ಆಯೋಗದ ಮೂಲಕ ಐ.ಎ.ಎಸ್ ಪದವಿಯನ್ನು ಪಡೆದು ಆಯ್ಕೆಯಾದ ಅಧಿಕಾರಿಗಳು ಕೇಂದ್ರ ಸರ್ಕಾರದ ಮತ್ತು ಲೋಕಸೇವಾ ಆಯೋಗದ ನಿಯಮಾವಳಿಗಳಿಗೆ ಅನುಗುಣವಾಗಿ ಮುಸ್ಸೂರಿಯಲ್ಲಿರುವ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡೆಮಿಯಲ್ಲಿ ಇಂಡಕ್ಷನದ ತರಬೇತಿ ಕಾರ್ಯಕ್ರಮ(ಐಟಿಪಿ) ಅಡಿಯಲ್ಲಿ ಕಡ್ಡಾಯವಾಗಿ ತರಬೇತಿಯನ್ನು ಪಡೆಯಬೇಕಾಗುತ್ತದೆ. ಅದೇ ರೀತಿ ರಾಜ್ಯದಲ್ಲಿ ಐ.ಎ.ಎಸ್ ಹುದ್ದೆಗೆ ಪದೋನ್ನತಿ ಪಡೆದ ಅಧಿಕಾರಿಗಳು, ರಾಜ್ಯದಲ್ಲಿ ಐ.ಎ.ಎಸ್ ಹುದ್ದೆಯನ್ನು ನಿರ್ವಹಿಸುವ ಮೊದಲು ಕಡ್ಡಾಯವಾಗಿ ಇಂಡಕ್ಷನ್ ತರಬೇತಿಯನ್ನು ಪಡೆಯಬೇಕಾಗಿರುತ್ತದೆ. ಈ ತರಬೇತಿಯನ್ನು ಹೊಂದದೆ ಪದೋನ್ನತಿ ಹೊಂದಿದವರು ನೇರವಾಗಿ ಐ.ಎ.ಎಸ್ ಹುದ್ದೆಯನ್ನು ಹೊಂದಲು ಅಥವಾ ಕಾರ್ಯ ನಿರ್ವಹಿಸಲು ಅವಕಾಶ ಇರುವುದಿಲ್ಲ.

ಕರ್ನಾಟಕದಲ್ಲಿ 2016, 2018, 2019, 2020, 2021 ಮತ್ತು 2022 ರಲ್ಲಿ ಸುಮಾರು 26 ಹಿರಿಯ ಕೆ.ಎ.ಎಸ್ ಅಧಿಕಾರಿಗಳಿಗೆ ರಾಜ್ಯ ಸರ್ಕಾರವು ಐ.ಎ.ಎಸ್ ಅಧಿಕಾರಿಗಳಾಗಿ ಪದೋನ್ನತಿ ನೀಡಿರುತ್ತದೆ. ಪದೋನ್ನತಿ ಪಡೆದ ಅಧಿಕಾರಿಗಳನ್ನು ರಾಜ್ಯ ಸರ್ಕಾರವು ಇಂಡಕ್ಷನ್ ತರಬೇತಿಗೆ ನಿಯೋಜನೆ ಮಾಡಿರುತ್ತದೆ. ಆದರೆ ಐ.ಎ.ಎಸ್ ಪದೋನ್ನತಿ ಪಡೆದ ರಾಜ್ಯದ ಸುಮಾರು 25 ಅಧಿಕಾರಿಗಳು ನಿಯಮಾನುಸಾರ ಇಂಡಕ್ಷನ್ ತರಬೇತಿ ಕಾರ್ಯಕ್ರಮಕ್ಕೆ ಒಳಪಟ್ಟಿರುವುದಿಲ್ಲ. ತರಬೇತಿ ಪಡೆಯುವುದರಿಂದ ಸರ್ಕಾರದ ನೀತಿಗಳು, ಕೆಲಸದ ಜವಾಬ್ದಾರಿಗಳು, ಹೊಂದಾಣಿಕೆ, ಜವಾಬ್ದಾರಿಯ ಹುದ್ದೆಶ ಮತ್ತು ದಕ್ಷತೆಯ ಸೇವೆಗೆ ಸಹಕಾರಿಯಾಗುತ್ತದೆ. ಪದೋನ್ನತಿ ಪಡೆದ ಅಧಿಕಾರಿಗಳು ತರಬೇತಿ ಪಡೆಯದಿರುವ ಕುರಿತು ಮತ್ತು ಇಂಡಕ್ಷನ್ ತರಬೇತಿ ಪಡೆಯದ ಹೊರತು ಅವರನ್ನು ಐ.ಎ.ಎಸ್ ಅಧಿಕಾರಿಗಳೆಂದು ಪರಿಗಣಿಸಲು ಸಾಧ್ಯವಿಲ್ಲವೆಂದು ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ. ಆದುದರಿಂದ ರಾಜ್ಯ ಸರ್ಕಾರವು ಐ.ಎ.ಎಸ್ ಪದೋನ್ನತಿ ಪಡೆದ ಅಧಿಕಾರಿಗಳನ್ನು ತರಬೇತಿಗೆ ಒಳಪಡಿಸುವುದು ಅನಿವಾರ್ಯವಾಗಿದ್ದು, ಸಾರ್ವಜನಿಕ ಮಹತ್ವವುಳ್ಳ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವ ಮೂಲಕ ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಕ್ರಮ ಕೈಗೊಳ್ಳಲು ಕೋರುತ್ತೇನೆ."

**ಉತ್ತರ:**

**ಮಾನ್ಯ ಶಾಸಕರು ಪ್ರಸ್ತಾಪಿಸಿರುವಂತೆ ಪರಿಶೀಲಿಸಿ ಈ ಕೆಳಕಂಡಂತೆ ಉತ್ತರಿಸಲಾಗಿದೆ:**

ರಾಜ್ಯ ಸರ್ಕಾರದ ಕೆ.ಎ.ಎಸ್. ಹಾಗೂ ಕೆ.ಎ.ಎಸ್. ಯೇತರ ಅಧಿಕಾರಿಗಳು The Indian Administrative Service (Appointment By Promotion) Regulations, 1955 ಮತ್ತು The Indian Administrative Service (Appointment By Selection) Regulations, 1997 ರನ್ವಯ ಭಾ.ಆ.ಸೇ. ವೃಂದಕ್ಕೆ ನೇಮಕಾತಿ ಹೊಂದುವ ಸಮಯದಲ್ಲಿ ಮೇಲೆ ಸೂಚಿಸಿರುವ ರೆಗುಲೇಷನ್ ಹಾಗೂ The Indian Administrative Service (Probation), 1954 ರನ್ವಯ ಅಧಿಕಾರಿಗಳನ್ನು ನೇಮಿಸಲಾಗುತ್ತದೆ.

ರಾಜ್ಯ ಸರ್ಕಾರದ ಅಧಿಕಾರಿಗಳು ಭಾ.ಆ.ಸೇ. ವೃಂದಕ್ಕೆ ನೇಮಕಗೊಂಡ ನಂತರ The Indian Administrative Service (Probation), 1954 ರ ನಿಯಮ-3(2) ಮತ್ತು 5(2) ರನ್ವಯ ಇಂಡಕ್ಷನ್ ತರಬೇತಿಯನ್ನು ಹೊಂದಬೇಕಾಗಿರುತ್ತದೆ.

Select List- 2016, 2017, 2018, 2019, 2020, 2021 ಮತ್ತು 2022 ರ ಎದುರಾಗಿ ಕೆ.ಎ.ಎಸ್. ವೃಂದದಿಂದ ಭಾ.ಆ.ಸೇ. ವೃಂದಕ್ಕೆ ಒಟ್ಟು 42 ಅಧಿಕಾರಿಗಳನ್ನು ಅನುಕ್ರಮವಾಗಿ ದಿನಾಂಕ: 18.01.2021, 25.11.2021, 15.02.2022, 08.08.2022 ಮತ್ತು 17.08.2023 ರಂದು ಕೇಂದ್ರ ಸರ್ಕಾರವು ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಿರುತ್ತದೆ.

ಸದರಿ 42 ಅಧಿಕಾರಿಗಳ ಪೈಕಿ, 16 ಅಧಿಕಾರಿಗಳು ಇಂಡಕ್ಷನ್ ತರಬೇತಿಯನ್ನು ಪೂರ್ಣಗೊಳಿಸಿರುತ್ತಾರೆ. ಉಳಿದಂತಹ 26 ಅಧಿಕಾರಿಗಳಲ್ಲಿ, 25 ಅಧಿಕಾರಿಗಳು ಸದರಿ ತರಬೇತಿಯನ್ನು ಪಡೆದಿರುವುದಿಲ್ಲ, ಮತ್ತು 01 ಅಧಿಕಾರಿಯು ದಿನಾಂಕ: 31.03.2025 ರಂದು ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.

ಕೇಂದ್ರ ಸರ್ಕಾರವು 2023 ನೇ ಸಾಲಿನಿಂದ ಪ್ರತಿ ವರ್ಷವು ಇಂಡಕ್ಷನ್ ತರಬೇತಿಗಳನ್ನು ಜರುಗಿಸುತ್ತಿದ್ದು, ಸದರಿ ತರಬೇತಿಯು ಪ್ರತಿ ವರ್ಷ - ಫೆಬ್ರವರಿ ಅಥವಾ ಮಾರ್ಚ್ ಮಾಹೆಯಲ್ಲಿ ಜರುಗಿಸಲಾಗುತ್ತಿರುತ್ತದೆ. ಆಡಳಿತಾತ್ಮಕ ಹಿತದೃಷ್ಟಿ, ಚುನಾವಣಾ ಕರ್ತವ್ಯ ಮತ್ತು ಆಯವ್ಯಯ ಪೂರ್ವಭಾವಿ ಸಿದ್ಧತೆಗಳಲ್ಲಿ ತೊಡಗಿರುವ ಅಧಿಕಾರಿಗಳನ್ನು ನಾಮನಿರ್ದೇಶಿಸಿರುವುದರಿಂದ ಇಂಡಕ್ಷನ್ ತರಬೇತಿಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ವಿನಾಯಿತಿಯನ್ನು ಕೋರಿರುತ್ತಾರೆ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ವಿನಾಯಿತಿಯನ್ನು ನೀಡಲಾಗಿರುತ್ತದೆ ಹಾಗೂ ಹೆಚ್ಚಿನ ಮಾತ್ರದ ಅಧಿಕಾರಿಗಳನ್ನು ತರಬೇತಿಗೆ ನಾಮನಿರ್ದೇಶಿಸುವ ಬಗ್ಗೆಯು ಸಹ ಕ್ರಮವಹಿಸಲಾಗಿರುತ್ತದೆ.

(ಸಿದ್ಧರಾಮಯ್ಯ)
ಮುಖ್ಯಮಂತ್ರಿ